ಗೊಬ್ಬರದ ವಿಧಗಳು	1998-99		1999-2000	
	ಪ್ರಮಾಣ (ಎಂ.ಟಿ.ಎಸ್.)	ಮೌಲ್ಯ (ಲಕ್ಷ ರೂ.ಗಳಲ್ಲಿ)	ಪ್ರಮಾಣ (ಎಂ.ಟಿ.ಎಸ್.)	ಮೌಲ್ಯ (ಲಕ್ಷ ರೂ.ಗಳಲ್ಲಿ)
1	2	3	4	5
ಯೂರಿಯಾ	3,46,185	28,906.01	3,33,289	33,859.19
ಡಿ.ಎ.ಪಿ.	1,81,667	22,520.26	2,08,769	25,391.60
ಇತರೆ	8,393	518.05	35,806	2,064.44
ಒಟ್ಟು	5,36,245	51,944.32	5,77,864	61,315.23

ಇ) ಈ ಕಂಪನಿಯ 1996-97 ರಿಂದ ಲಾಭದಲ್ಲಿದೆ. 1996-97 ರಿಂದ ಪಡೆದಿರುವ ನಿವ್ವಳ ಲಾಭ ಕೆಳಕಂಡಂತಿದೆ:

ವರ್ಷ	ರೂ. ಕೋಟಿಗಳಲ್ಲಿ
1996-97	0.18
1997-98	17.33
1998-99	30.23
1999-2000	34.84

ಈ) ಕರ್ನಾಟಕ ಸರ್ಕಾರ ನೀಡಿರುವ ಆರ್ಥಿಕ ಸಹಾಯ:

ಸಾಲ	ರೂ. 14.59 ಕೋಟಿಗಳು
ಮಾರಾಟ ತೆರಿಗೆ ಮುಂದೂಡುವಿಕೆ	ರೂ. 13.73 ಕೋಟಿಗಳು
ಒಟ್ಟು	ರೂ. 28.32 ಕೋಟಿಗಳು

ಬಿ.ಐ.ಎಫ್.ಆರ್. ನ ಮಂಜೂರು ಮಾಡಿರುವ ಕಂಪನಿಯ ಪುನರುಜ್ಜೀವನ ಯೋಜನೆಯಂತೆ ಸದರಿ ಸಾಲವನ್ನು 2005-06ನೇ ಸಾಲಿನಿಂದ ಪ್ರಾರಂಭಿಸಿ 5 ವಾರ್ಷಿಕ ಸಮ ಕಂತುಗಳಲ್ಲಿ ಕಂಪನಿಯು ತೀರಿಸಬೇಕಾಗಿದೆ.

ಕೇಂದ್ರ ಸರ್ಕಾರದಿಂದ ಕಂಪನಿಯು ಯಾವುದೇ ಹಣ ಸಹಾಯ ಪಡೆದಿರುವುದಿಲ್ಲ.

ಉ) ಈ ಕಂಪನಿಯು 1999-2000ದಲ್ಲಿ ಒಟ್ಟು 328 ಅಧಿಕಾರಿಗಳಿಗೆ ಒಟ್ಟು ರೂ. 538.60 ಲಕ್ಷಗಳ ಸಂಭಾವನೆಯನ್ನು ನೀಡಿದೆ.

ಉತ್ತರ ಕರ್ನಾಟಕ ಭಾಗದ ಗ್ರಾಮೀಣ ಕೃಷಿರಾಸು ಅಭಿವೃದ್ಧಿ

1565 (2052) ಶ್ರೀ ಬಿಲ್ಲಪ್ ಚಂದ್ರಕಾಂತ ಗುರಪ್ಪ (ಧಾರವಾಡ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶುಸಂಗೋಪನಾ ಇಲಾಖೆಯಲ್ಲಿ ಹಾಲಿನ ಹಸು (ರಾಸುತಳಿ) ಅಭಿವೃದ್ಧಿ ಕುರಿತು ಕೈಗೊಂಡಿರುವ ಕ್ರಮಗಳೇನು;

ಆ) ಉತ್ತರ ಕರ್ನಾಟಕ ಭಾಗದ ಉತ್ತಮ ಹಾಲು ಹಿಂಡುವ ಗ್ರಾಮೀಣ ಕೃಷಿ ತಳಿ ರಾಸು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ಕಾರ ಪರಿಶೀಲಿಸುತ್ತಿದೆಯೇ;

ಇ) ಮಿಶ್ರತಳಿ ಹಾಗೂ ಲಾಭದಾಯಕ ತಳಿಗಳೆಂದು ಗುರುತಿಸಿರುವ ಹಸುಗಳ ಹೆಸರುಗಳೇನು:ಇವುಗಳು ಯಾವ ಭಾಗದಲ್ಲಿ ಹೆಚ್ಚಿಗಿವೆ.

ಈ) ಹಾಲು ಸಂಶೋದನೆಯಲ್ಲಿ ಉತ್ತಮ ಸಾಧನೆ ಮಾಡಲು ಕೈಗೊಂಡ ಇನ್ನಿತರ ಕಾರ್ಯ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು).

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ)1) ದೇಶೀಯ ತಳಿಗಳಾದ ಅಮೃತ ಮಹಲ್, ಹಳ್ಳಿಕಾರ್, ಖಿಲ್ಲಾರ್ ಮತ್ತು ದೇವಣಿ ತಳಿ ಉತ್ತಮ ಲಕ್ಷಣಗಳುಳ್ಳ ಹೋರಿಗಳ ಆಯ್ಕೆ.

2) ಈ ಹೋರಿಗಳನ್ನು ವೀರ್ಯ ಸಂಸ್ಕರಣಾ ಕೇಂದ್ರಗಳಲ್ಲಿ ಸಾಕಿ ಅಭಿವೃದ್ಧಿ ಪಡಿಸಲಾಗುತ್ತಿದೆ.

3) ಈ ಹೋರಿಗಳ ವೀರ್ಯದಿಂದ ಘನೀಕೃತ ವೀರ್ಯ ನಳಿಕೆಯನ್ನು ಉತ್ಪಾದಿಸಲಾಗುತ್ತಿದೆ.

4) ರಾಜ್ಯಾದ್ಯಂತ ಕೃತಕ ಗರ್ಭಧಾರಣೆ ಮೂಲಕ ಈ ತಳಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

5) ಈ ತಳಿಗಳ ಶುದ್ಧತೆಯನ್ನು ಪ್ರತ್ಯೇಕವಾಗಿ ಕಾಪಾಡಿ ಅಭಿವೃದ್ಧಿ ಪಡಿಸಲಾಗುತ್ತಿದೆ.

6) ಈ ತಳಿಗಳ ಶುದ್ಧತೆಯನ್ನು ಹೋರಿಕರುಗಳ ಉತ್ತಮ ಗುಣಮಟ್ಟದ ಆಯ್ಕೆ ಮೂಲಕ ಮಾಡಲಾಗುತ್ತಿದೆ.

ಆ) ಹೌದು.

ಇ) ಜರ್ಸಿ, ಹೆಚ್.ಎಫ್. ತಳಿಗಳು ಹಾಲು ಉತ್ಪಾದನೆಗೆ ಹೆಸರುವಾಸಿ ತಳಿಗಳಾಗಿದ್ದು, ಇವುಗಳು ರಾಜ್ಯಾದ್ಯಂತ ಹರಡಿದ್ದರೂ ಹಳೇ ಮೈಸೂರು ಭಾಗದಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದು ಈ ಭಾಗದ ರೈತರು ಹೆಚ್ಚಾಗಿ ಈ ರಾಸುಗಳನ್ನು ಪಾಲನೆ ಮಾಡುತ್ತಿದ್ದರೆ.

ಈ) 1) ಹೆಚ್ಚು ಹಾಲು ಇಳುವರಿ ತಳಿಗಳಾದಂತಹ ಜರ್ಸಿ ಮತ್ತು ಹೆಚ್.ಎಫ್. ಹೋರಿಗಳ ಆಮದು.

2) ಈ ಹೋರಿಗಳ ವೀರ್ಯದಿಂದ ಘನೀಕೃತ ವೀರ್ಯ ನಳಿಕೆಗಳ ಉತ್ಪಾದನೆ.

3) ಘನೀಕೃತ ವೀರ್ಯ ಉತ್ಪಾದನಾ ಪ್ರಯೋಗ ಶಾಲೆಗಳನ್ನು ಆಧುನಿಕ ಯಂತ್ರೋಪಕರಣಗಳಿಂದ ಸಜ್ಜುಗೊಳಿಸಿ ಬಲವರ್ಧಿಸುವುದು.

4) ಈ ತಳಿಗಳ ಘನೀಕೃತ ವೀರ್ಯ ನಳಿಕೆಗಳನ್ನು ಗ್ರಾಮಾಂತರ ಪ್ರದೇಶಗಳ ಕೃತಕ ಗರ್ಭಧಾರಣ ಕೇಂದ್ರಗಳ ಮೂಲಕ ಉಪಯೋಗಿಸಿಕೊಂಡು ಅಭಿವೃದ್ಧಿ ಪಡಿಸುವುದು.

ಧಾರವಾಡದ ಕೆ.ಎಂ.ಎಫ್. ಸಿಬ್ಬಂದಿಗಳ ವಿವರ

1566 (2053) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಕೆ.ಎಂ.ಎಫ್. ನಲ್ಲಿರುವ ಸಿಬ್ಬಂದಿಯಷ್ಟು: (ವಿವರವನ್ನು ಹುದ್ದೆವಾರು ನೀಡುವುದು):ಅವಶ್ಯಕತೆಗಿಂತಲೂ ಹೆಚ್ಚಾಗಿರುವ ಸಿಬ್ಬಂದಿಯ ಪೂರ್ಣ ವಿವರ ನೀಡುವುದು:

ಆ) ಧಾರವಾಡ ಘಟಕಕ್ಕೆ ಪ್ರತಿನಿತ್ಯ ಯಾವ ಸಂಸ್ಥೆಗಳಿಂದ ಬರುತ್ತಿದೆ, ಪ್ರತಿನಿತ್ಯ ಹಾಲಿನಿಂದ ಸಂಸ್ಕರಿಸಿದ ಮಾರಾಟದ ಪರಿವರ್ತಿಸಿದ ವಸ್ತುಗಳು ಯಾವುವು (ವಿವರ ನೀಡುವುದು);